ದಿನಾಂಕ : 29.07.2024

ಅಸಲು ದಾವೆ: 9/2021 ಪಿ.ಡಬ್ಲ್ಯೂ: 2

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : 1, 3 ಮತ್ತು 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :</u>**

ನಾನು SSLC ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಮತ್ತು ವಾದಿ ರಾಜು ಆತ್ಮೀಯರಲ್ಲ ಬಾಜುದಾರರು. ಅವರ ಜಮೀನಿನ ದಕ್ಷಿಣಕ್ಕೆ ನನ್ನ ಜಮೀನು ಇರುತ್ತದೆ. ನನ್ನ ಜಮೀನು 1 ಎಕರೆ 1 ಗುಂಟೆ ವಿಸ್ತೀರ್ಣವಿರುತ್ತದೆ. ಸದರಿ ಜಮೀನನ್ನು ಮಹಾಬಲರಾಯರಿಂದ ಖರೀದಿ ಮಾಡಿದ್ದೇನೆ. ನನ್ನ ಜಮೀನಿನ ಪೂರ್ವಕ್ಕೆ ರಸ್ತೆ ಮತ್ತು ಉಳಿಕೆ ಜಾಗ ಎಂದು ಇದೆ. ಸದರಿ ನನ್ನ ಜಮೀನಿನ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಮಹಾಬಲರಾಯರವರು ಪೂರ್ವದ ಚೆಕ್ ಬಂದಿ ರಸ್ತೆ ಮತ್ತು ನನ್ನ ಉಳಿಕೆ ಜಾಗ ಎಂದು ಬರೆದುಕೊಟ್ಟಿದ್ದಾರೆ. ಸದರಿ ರಸ್ತೆ ಮತ್ತು ನನ್ನ ಉಳಿಕೆ ಜಾಗ ಎಂದು ಬರೆದಿರುವ ಜಾಗ ರಸ್ತೆಯಿಂದ ಪೂರ್ವಕ್ಕೆ ಇರುತ್ತದೆ. ರಸ್ತೆಯಿಂದ ಪೂರ್ವಕ್ಕೆ ಇರುವ ಜಾಗದಲ್ಲಿ ಯಾರು ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ನಾನು ಕೊಂಡುಕೊಂಡ ನಂತರ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ಜಮೀನಿನ ದಕ್ಷಿಣಕ್ಕೆ ಆನಂದ ಮತ್ತು ಇತರರ ಜಮೀನು ಇರುತ್ತದೆ. ನೀವು ಖರೀದಿ ಮಾಡಿರುವುದು 1 ಎಕರೆ 1 ಗುಂಟೆಯಲ್ಲ ಕೇವಲ 1 ಎಕರೆ ಮಾತ್ರ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಕ್ರಯ ಪತ್ರವನ್ನು ಮುಂದಿನ ವಾಯಿದೆಯಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ಕೊಡುತ್ತೇನೆ ಎಂದು ಉತ್ತರಿಸುತ್ತಾರೆ.

**ಈ ಹಂತದಲ್ಲಿ ಸಾಕ್ಷಿ ಮುಂದಿನ ವಾಯಿದೆಯಲ್ಲಿ ನನ್ನ ಕ್ರಯ ಪತ್ರ ಹಾಜರು ಪಡಿಸುವುದಾಗಿ ಹೇಳಿದ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.